ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	745(722)
ಸದಸ್ಯರ ಹೆಸರು	:	ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	20.12.2021
ಉತ್ತರಿಸುವವರು	:	ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ-ವನ್ಯ ಪ್ರಾಣಿಗಳ ಸಂಘರ್ಷ ಹೆಚ್ಚುತ್ತಿದ್ದು, ಈ ಸಂಘರ್ಷದ ಹಿನ್ನಲೆಯಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿರುವ ರೈತರು ತಮ್ಮ ಜಮೀನುಗಳನ್ನು ಅರಣ್ಯ ಇಲಾಖೆಗೆ ಮಾರಾಟ ಮಾಡಲು ಮುಂದಾಗಿರುವುದು ನಿಜವೇ; ಹಾಗಿದ್ದಲ್ಲಿ ಇಂತಹ ರೈತರಿಂದ ಜಮೀನುಗಳನ್ನು ಕೊಳ್ಳಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ-ವನ್ಯ ಪ್ರಾಣಿಗಳ ಸಂಘರ್ಷ ಹೆಚ್ಚುತ್ತಿದ್ದು, ಈ ಸಂಘರ್ಷದ ಹಿನ್ನಲೆಯಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿರುವ ರೈತರು ತಮ್ಮ ಜಮೀನುಗಳನ್ನು ಅರಣ್ಯ ಇಲಾಖೆಗೆ ಮಾರಾಟ ಮಾಡಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ. ಅಪಜೀ/139/ಎಫ್‌ಎಎಫ್/2012 ದಿನಾಂಕ: 22-02-2014ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿ ಮಾನವ-ವನ್ಯ ಮೃಗಗಳ ಸಂಘರ್ಷಕ್ಕೆ ಒಳಗಾಗುವ ಪ್ರದೇಶಗಳನ್ನು ಗುರುತಿಸಲಾಗಿದೆಯೇ; ಮತ್ತು ಈ ಪ್ರದೇಶಗಳಲ್ಲಿ ವನ್ಯಪ್ರಾಣಿಗಳು ಸ್ವಾಭಾವಿಕವಾಗಿ ಅಲೆದಾಡುವ ದಾರಿ ಮತ್ತು ಪ್ರದೇಶಗಳು ಆಗಿವೆಯೇ; ಹಾಗೂ ಈ ದಾರಿಗಳಲ್ಲಿ ಮಾನವನ ವಸಾಹತು ನಿರ್ಮಾಣ ಆಗಿ, ವನ್ಯಪ್ರಾಣಿಗಳ ನೆಲಸುವಿಕೆಗೆ ಅಡಚಣೆ ಉಂಟಾಗಿದೆಯೇ; ಈ ಬಗ್ಗೆ ನಡೆದಿರುವ ಅಧ್ಯಯನಗಳು ಯಾವುವು; (ವಿವರ ನೀಡುವುದು)	ರಾಜ್ಯದಲ್ಲಿ ಕಳೆದ ಎರಡುವರೆ ವರ್ಷಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿಗೆ ಸಂಬಂಧಿಸಿದಂತೆ ಇ-ಪರಿಹಾರ ತಂತ್ರಾಂಶದ ಮೂಲಕ ಪಾವತಿಸಲಾದ ದಯಾತ್ಮಕ ಧನದ ಅನುಸಾರ ಮಾನವ ವನ್ಯಪ್ರಾಣಿ ಸಂಘರ್ಷಕ್ಕೆ ಕಾರಣವಾದ ಪ್ರದೇಶಗಳನ್ನು ಗುರುತಿಸಲಾಗಿದೆ. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 14029/2008ರಲ್ಲಿ ನೀಡಿರುವ ಆದೇಶದಂತೆ ಪ್ರೊ. ರಾಮನ್ ಸುಕುಮಾರ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಆನೆ ಪಡೆ ರಚನೆ ಮಾಡಿ ಅಧ್ಯಯನ ನಡೆಸಲಾಗಿದೆ. ವೈಲ್ಡ್ ಲೈಫ್ ಟ್ರಸ್ಟ್ ಆಫ್ ಇಂಡಿಯಾ, ಡೆಹರಾಡೂನ್ ರವರು ನಡೆಸಿದ ಅಧ್ಯಯನದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಂಬತ್ತು ಆನೆ ಕಾರಿಡಾರ್‌ಗಳನ್ನು ಗುರುತಿಸಲಾಗಿದೆ.
ಇ)	ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಮಾನವ-ವನ್ಯ ಜೀವಿಗಳ ನಡುವೆ ನಡೆದ ಸಂಘರ್ಷಗಳ ಸಂಖ್ಯೆ ಎಷ್ಟು; ಮತ್ತು ಈ ದಾಳಿಯಿಂದ ಉಂಟಾಗಿರುವ ಬೆಳೆಹಾನಿ ಮತ್ತು ಜೀವ ಹಾನಿಗಳೆಷ್ಟು; ಹಾಗೂ ನೊಂದವರಿಗೆ ಮತ್ತು ಮೃತರ ಕುಟುಂಬದವರಿಗೆ ನೀಡಿರುವ ಪರಿಹಾರ ಮತ್ತು ಇತರೆ ಸವಲತ್ತುಗಳು ಯಾವುವು? (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಕಳೆದ 5 ವರ್ಷದಲ್ಲಿ ವನ್ಯಪ್ರಾಣಿ ಹಾವಳಿಯಿಂದ ಉಂಟಾದ ಬೆಳೆಹಾನಿ ಹಾಗೂ ಮಾನವ-ಪ್ರಾಣಹಾನಿ ಪ್ರಕರಣಗಳ ಜಿಲ್ಲಾವಾರು ವಿವರ ಹಾಗೂ ಪಾವತಿಸಿದ ದಯಾತ್ಮಕ ಧನದ ವಿವರ ಅನುಬಂಧ-2 ಹಾಗೂ ಅನುಬಂಧ-3ರಲ್ಲಿ ಒದಗಿಸಲಾಗಿದೆ.

.....2

ಕ್ರ. ಸಂ.	ಪ್ರಶ್ನೆ	ಉತ್ತರ
		ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ಪ್ರಕರಣಗಳಿಗೆ ದಯಾತ್ಮಕ ಧನವನ್ನು ಈ ಕೆಳಕಂಡ ಆದೇಶಗಳನ್ವಯ ನಿಯಮಾನುಸಾರ ಪರಿಶೀಲಿಸಿ ಪಾವತಿಸಲಾಗುತ್ತಿದೆ. • ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 66 ಎಫ್‌ಡಬ್ಲ್ಯೂಎಲ್ 2019 ದಿನಾಂಕ: 07-01-2020ರನ್ವಯ ನಿಯಮಾನುಸಾರ ಪರಿಶೀಲಿಸಿ ಪ್ರತಿ ಪ್ರಕರಣಕ್ಕೆ ರೂ. 7,50,000/- ಗಳನ್ನು ಪಾವತಿಸಲಾಗುತ್ತಿದೆ. • ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 130 ಎಫ್‌ಡಬ್ಲ್ಯೂಎಲ್ 2016 ದಿನಾಂಕ: 19-09-2016ರ ಆದೇಶದನ್ವಯ ವನ್ಯಪ್ರಾಣಿಗಳಿಂದ ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಪ್ರತಿ ಪ್ರಕರಣಕ್ಕೆ ರೂ.5,00,000/- ದಯಾತ್ಮಕ ಧನವನ್ನು ಅಂಗವಿಕಲ ವ್ಯಕ್ತಿಗೆ ನೀಡಲಾಗುತ್ತಿದೆ. ಭಾಗಶಃ ಅಂಗವಿಕಲತೆ ಹೊಂದಿದ್ದಲ್ಲಿ ಪ್ರತಿ ಪ್ರಕರಣಕ್ಕೆ ರೂ2,50,000/- ದಯಾತ್ಮಕ ಧನವನ್ನು ಅಂಗವಿಕಲ ವ್ಯಕ್ತಿಗೆ ನೀಡಲಾಗುತ್ತಿದೆ. • ಅಲ್ಲದೇ ವನ್ಯಪ್ರಾಣಿಗಳ ದಾಳಿಯಿಂದ ಶಾಶ್ವತ ಅಂಗವಿಕಲತೆ ಉಂಟಾದ ವ್ಯಕ್ತಿಗೆ ಹಾಗೂ ಮೃತಪಟ್ಟ ವ್ಯಕ್ತಿಯ ಕುಟುಂಬದ ವಾರಸುದಾರರಿಗೆ ನೀಡಲಾಗುವ ದಯಾತ್ಮಕ ಧನ ಜೊತೆಗೆ 5 ವರ್ಷಗಳವರೆಗೆ 2 ಸಾವಿರ ರೂ.ಗಳ ಮಾಸಾಶನವನ್ನು ಆದೇಶ ಸಂಖ್ಯೆ ಅಪಜೀ 61 ಎಫ್‌ಎಪಿ 2018 ದಿನಾಂಕ: 16-10-2018ರ ಅನುಸಾರ ನೀಡಲಾಗುತ್ತಿದೆ. ಮಾನವ ಗಾಯ/ ಭಾಗಶಃ ಅಂಗವಿಕಲತೆ/ ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಆದೇಶ ಸಂಖ್ಯೆ ಎಫ್‌ಇಇ 128 ಎಫ್‌ಡಬ್ಲ್ಯೂಎಲ್ 2013 ದಿನಾಂಕ: 15-09-2015ರನ್ವಯ ಸಿ.ಜಿ.ಹೆಚ್.ಎಸ್. ದರಗಳಿಗೆ ಮಿತಗೊಳಿಸಿ ವೈದ್ಯಕೀಯ ಬಿಲ್ಲುಗಳನ್ನು ಪಾವತಿಸಲಾಗುತ್ತದೆ.
ಈ)	ರಾಜ್ಯದಲ್ಲಿ ವನ್ಯಪ್ರಾಣಿಗಳಾದ ಆನೆ, ಹುಲಿ ಮತ್ತು ಚಿರತೆಗಳ ಹಾವಳಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದ್ದು, ಇವುಗಳ ನಿಯಂತ್ರಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಯಾವುವು; ಅವುಗಳ ಅನುಷ್ಠಾನ ಯಾವ ಹಂತದಲ್ಲಿವೆ; ಈ ಕಾರ್ಯಕ್ರಮಗಳಿಗೆ ಕಳೆದ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ದೊರೆತ ಅನುದಾನವೆಷ್ಟು; ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳಾವುವು (ವಿವರ ನೀಡುವುದು)	ರಾಜ್ಯದಲ್ಲಿ ವನ್ಯಪ್ರಾಣಿಗಳ ಹಾವಳಿ ನಿಯಂತ್ರಣಕ್ಕೆ ಕೇಂದ್ರ ಸರ್ಕಾರದಿಂದ ಯಾವುದೇ ಯೋಜನೆ ಇರುವುದಿಲ್ಲ. ಆದರೆ ರಾಜ್ಯ ಸರ್ಕಾರದಿಂದ **ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ** ಎಂಬ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನ ಬಿಡುಗಡೆಯಾಗುತ್ತಿದ್ದು, ಸದರಿ ಶೀರ್ಷಿಕೆಯಡಿ ಕಳೆದ ಐದು ವರ್ಷಗಳಲ್ಲಿ ಒದಗಿಸಿದ ಅನುದಾನದ ವಿವರ ಕೆಳಗಿನಂತಿದೆ.

.....3

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
(ರೂ. ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಒದಗಿಸಿದ ಅನುದಾನ</th></tr>
<tr><td>2017-18</td><td>7,489</td></tr>
<tr><td>2018-19</td><td>8,724</td></tr>
<tr><td>2019-20</td><td>8,492</td></tr>
<tr><td>2020-21</td><td>7,035</td></tr>
<tr><td>2021-22</td><td>6,250</td></tr>
<tr><td>ಒಟ್ಟು</td><td>37,990/-</td></tr>
</table>
ಸದರಿ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ/ಕೈಗೊಳ್ಳಲಾಗುತ್ತಿದೆ.
1. ಆನೆ ತಡೆ ಕಂದಕ ನಿರ್ಮಾಣ ಮತ್ತು ನಿರ್ವಹಣೆ
2. ಸೋಲಾರ್ ತಂತಿ ಬೇಲಿ ನಿರ್ಮಾಣ ಮತ್ತು ನಿರ್ವಹಣೆ
3. ಡ್ರಯ್ ರಬಲ್ ಸ್ಟೋನ್ ಮಾಸನರಿ ವಾಲ್
4. ದನಕರುಗಳ ತಡೆ ಕಂದಕ
5. ಹಿಮ್ಮೆಟ್ಟಿಸುವ ತಂಡಗಳ ನಿರ್ವಹಣೆ
6. ಕ್ಷಿಪ್ರ ಸ್ಪಂದನ ತಂಡಗಳ ರಚನೆ
7. ಕಲ್ವರ್ಟ್ಸ್, ಕಾಸ್ ವೇ, ಚೆಕ್‌ಡ್ಯಾಮ್, ಕೆರೆಗಳ ಹೂಳೆತ್ತುವುದು, ಕೊಳವೆ ಬಾವಿ ನಿರ್ಮಿಸಿ ಸೋಲಾರ್ ಪಂಪುಗಳ ಮೂಲಕ ನೀರು ಒದಗಿಸುವುದು.
8. ರಸ್ತೆಗಳ ನಿರ್ವಹಣೆ, ಇತ್ಯಾದಿ
</td></tr>
<tr><td>ಉ)</td><td>ರಾಜ್ಯದಲ್ಲಿ ಪುಂಡಾಟದ ಆನೆ, ಹುಲಿ ಮತ್ತು ಚಿರತೆಗಳನ್ನು ಹಿಡಿದು ಸ್ಥಳಾಂತರಿಸುವ ಯೋಜನೆಗಳು ಯಾವುವು; ಕಳೆದ 5 ವರ್ಷಗಳಲ್ಲಿ ಈ ಯೋಜನೆ ಅಡಿಯಲ್ಲಿ ಸಾಧಿಸಿರುವ ಪ್ರಗತಿ ಯಾವುವು;(ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಪುಂಡಾಟದ ಆನೆ, ಹುಲಿ ಮತ್ತು ಚಿರತೆಗಳನ್ನು ಹಿಡಿದು ಸ್ಥಳಾಂತರಿಸುವ ಯಾವುದೇ ಯೋಜನೆ ಇರುವುದಿಲ್ಲ.

ಆದಾಗ್ಯೂ, ಮಾನವ-ವನ್ಯಪ್ರಾಣಿ ಸಂಘರ್ಷ ಸಂದರ್ಭಗಳಲ್ಲಿ ಸಂಘರ್ಷಕ್ಕೆ ಕಾರಣವಾದ ವನ್ಯಪ್ರಾಣಿಯನ್ನು ನಿರ್ದಿಷ್ಟವಾಗಿ ಗುರುತಿಸಿ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಸೆಕ್ಷನ್-11ರಂತೆ ಸೆರೆಹಿಡಿದು ವೈದ್ಯಕೀಯ ತಪಾಸಣೆಯನ್ನು ಆಧರಿಸಿ ಸೂಕ್ತ ಅರಣ್ಯ ಪ್ರದೇಶಕ್ಕೆ ಅಥವಾ ಶುಶ್ರೂಷೆಗಾಗಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗುತ್ತದೆ.</td></tr>
<tr><td>ಊ)</td><td>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ತಪ್ಪಿಸಲು ಶಾಶ್ವತ ತಡೆಗೋಡೆ ನಿರ್ಮಾಣದ ಯೋಜನೆ ಅನುಷ್ಠಾನ ಯಾವ ಹಂತದಲ್ಲಿದೆ; ಆನೆಗಳ ಸೆರೆ ಮತ್ತು ಸ್ಥಳಾಂತರದ ಬಗ್ಗೆ ತಜ್ಞರು ನೀಡಿರುವ ವರದಿಗಳನ್ನು ಅನುಷ್ಠಾನಗೊಳಿಸಲಾಗಿದೆಯೇ; ಒಂದು ವೇಳೆ ತಜ್ಞರ ಅಭಿಪ್ರಾಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿಲುವಿಗೆ ವಿರುದ್ಧವಾಗಿದ್ದಲ್ಲಿ ಈ ಬಗ್ಗೆ ಬಲವಾದ ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಉಪಯೋಗಿತ ರೈಲ್ವೆ ಹಳಿಗಳನ್ನು ಉಪಯೋಗಿಸಿ 624 ಕಿ.ಮೀ. ಉದ್ದದ ರೈಲ್ವೆ ಬ್ಯಾರಿಕೇಡ್ ನಿರ್ಮಾಣದ ಅವಶ್ಯವಿದ್ದು, 2019-20ನೇ ಸಾಲಿನ ವರಗೆ 165.38 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿರುತ್ತದೆ. ಉಳಿದ 458.62 ಕಿ.ಮೀ. ಬ್ಯಾರಿಕೇಡ್ ಅನ್ನು ಮೂರು ವರ್ಷಗಳ ಅವಧಿಯಲ್ಲಿ ನಿರ್ಮಿಸಲು ರೂ. 550.34 ಕೋಟಿಗಳ ಅವಶ್ಯವಿದ್ದು, ಅನುದಾನಕ್ಕಾಗಿ ರಾಷ್ಟ್ರೀಯ</td></tr>
</table>

......4

ಕ್ರ. ಸಂ.	ಪ್ರಶ್ನೆ	ಉತ್ತರ
		ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ **(National Compensatory Afforestation Fund Management & Planning Authority)** ರವರಿಗೆ ದಿನಾಂಕ: 16-07-2020ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕಾಮಗಾರಿಯನ್ನು ರಾಜ್ಯ ಸರ್ಕಾರವು 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಈ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ಈವರೆಗೆ ಒಟ್ಟು 181.802 ಕಿ.ಮೀ. ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿರುತ್ತದೆ.

ಸಂಖ್ಯೆ: ಅಪಜೀ 239 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ವಿ. ತಿಪ್ಪೇಸ್ವಾಮಿ
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 7458
ಅನುಬಂಧ:-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಕೆ.ಸಿ. ಕಾರ್ಯಪ್ಪ, ಏರ್ ಮಾರ್ಷಲ್ (ನಿವೃತ್ತ) ಇವರು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ I.A. No. 2530-2531ರ ಸಂಬಂಧ ಪ್ರಾಕೃತಿಕ ಕಾಯ್ದಿಟ್ಟ ಅರಣ್ಯ ಮತ್ತು ರಕ್ಷಿತ ಅರಣ್ಯಗಳ ಮಧ್ಯ ಭಾಗದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿರುವ ಖಾಸಗಿ ಪ್ರದೇಶವನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಕೇಂದ್ರೀಯ ಅಧಿಕಾರಸ್ಥ ಸಮಿತಿಯು (CEC) ಮಾಡಿರುವ ಶಿಫಾರಸ್ಸು ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 139 ಎಫ್‌ಎಫ್ 2012, ದಿನಾಂಕ: 08-08-2012.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ರವರ ಅಧಿಕೃತ ಜ್ಞಾಪನ ಸಂಖ್ಯೆ: ಎ(5):ಸಿಸಿಎಫ್:ಎಲ್‌ಆರ್:ಸಿಆರ್: 224/2012-13, ದಿನಾಂಕ: 16-10-2012.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 19-11-2013 ರಂದು ನಡೆದ ಸಭಾನಡವಳಿಗಳು.
4. ಸರ್ಕಾರಿ ಆದೇಶ ಸಂಖ್ಯೆ: ಅಪಜೀ 139 ಎಫ್‌ಎಫ್ 2012, ದಿನಾಂಕ: 06.01.2014.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06.01.2014 ರಂದು ನಡೆದ ಸಭಾನಡವಳಿಗಳು,

*****

ಪ್ರಸ್ತಾವನೆ:-

1. ಶ್ರೀ ಕೆ.ಸಿ. ಕಾರ್ಯಪ್ಪ, ಏರ್ ಮಾರ್ಷಲ್ (ನಿವೃತ್ತ) ಇವರು ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ I.A. No. 2530-2531ರ ಸಂಬಂಧ ಕೇಂದ್ರೀಯ ಅಧಿಕಾರಸ್ಥ ಸಮಿತಿಯು (CEC) ಪ್ರಾಕೃತಿಕ ಕಾಯ್ದಿಟ್ಟ ಅರಣ್ಯ ಮತ್ತು ರಕ್ಷಿತ ಅರಣ್ಯಗಳ ಮಧ್ಯ ಭಾಗದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿರುವ ಖಾಸಗಿ ಪ್ರದೇಶವನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ನೀಡಲಾದ ಶಿಫಾರಸ್ಸಿನಂತೆ ಉಲ್ಲೇಖ (1) ರಲ್ಲಿ ಓದಲಾದ ದಿನಾಂಕ: 08-08-2012ರ ಆದೇಶದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ನೇಮಕ ಮಾಡಲಾಗಿದೆ.

2. ಈ ತಜ್ಞರ ಸಮಿತಿಯು ದಿನಾಂಕ: 05-10-2012 ರಂದು ಸಭೆ ಸೇರಿ ಸುದೀರ್ಘವಾಗಿ ಚರ್ಚಿಸಿ ಪ್ರಥಮವಾಗಿ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಮಿಟಿಗಳನ್ನು ನೇಮಿಸಿ ಈ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂದಾಖಲೆ) ಹಾಗೂ ಸದಸ್ಯ ಕಾರ್ಯದರ್ಶಿ ಇವರಿಗೆ ಸೂಚಿಸಿತು. ಅದರಂತೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ರವರು ಉಲ್ಲೇಖ (2)ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ರಾಜ್ಯಮಟ್ಟದ ಉಪ ಸಮಿತಿ ಹಾಗೂ ವೃತ್ತ ಮಟ್ಟದ ಉಪ ಸಮಿತಿಗಳನ್ನು ರಚಿಸಿರುತ್ತಾರೆ. ವೃತ್ತ ಮಟ್ಟ ಸಮಿತಿಗಳು ಈ ಬಗ್ಗೆ ವಿವರಗಳನ್ನು ಸಂಗ್ರಹಿಸಿ, ಸಭೆಗಳನ್ನು ನಡೆಸಿ, ಸ್ವಾಧೀನ ಪಡಿಸಿಕೊಳ್ಳಲು ಈವರೆಗೆ 10 ಅರಣ್ಯ ವೃತ್ತಗಳಿಂದ 48683 ಎಕರೆ ಖಾಸಗಿ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಗುರುತಿಸಿರುತ್ತಾರೆ.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾದ ತಜ್ಞರ ಸಮಿತಿಯು ಮೇಲೆ ಉಲ್ಲೇಖ (3)ರಲ್ಲಿ ಓದಲಾದ ದಿನಾಂಕ: 19-11-2013 ರಂದು ಸಭೆ ಸೇರಿ 1,34,217 ಹೆಕ್ಟರ್ ಅರಣ್ಯ ಪ್ರದೇಶವನ್ನು ಪ್ರಾಕೃತಿಕ ಅರಣ್ಯ ಇರುವ ಖಾಸಗಿ ಪ್ರದೇಶವೆಂದು ಗುರುತಿಸಿರುವುದನ್ನು "Private Forest Lands which are not with the Forest Department" ಎಂದು ಗಮನಿಸಲಾಯಿತು ಮತ್ತು ಖಾಸಗಿ ಅರಣ್ಯ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಕೇವಲ ಒಟ್ಟಾರೆ ಮಾಹಿತಿ ಸಾಕಾಗುವುದಿಲ್ಲ. ಈ ಬಗ್ಗೆ ಪ್ರತೀ ಖಾಸಗಿ ಅರಣ್ಯ ಜಮೀನುಗಳ ಬಗ್ಗೆ ಪೂರ್ಣ ಮಾಹಿತಿ ಮತ್ತು ದಾಖಲಾತಿಗಳ ಅವಶ್ಯಕವಿದ್ದು, ಈ ಕೆಳಕಂಡ ವಿವರಗಳನ್ನೊಳಗೊಂಡ ದಾಖಲೆಗಳನ್ನು ಪರಿಶೀಲಿಸಿ ಒದಗಿಸಲು ತೀರ್ಮಾನಿಸಲಾಯಿತು.

(i) ಖಾಸಗಿ ಅರಣ್ಯ ಪ್ರದೇಶದ ಒಡೆತನ ಹೊಂದಿರುವವರ ಹೆಸರು, ವಿಳಾಸ, ಕುಟುಂಬದ ಸದಸ್ಯರ ಸಂಖ್ಯೆ, ಸದರಿ ಖಾಸಗಿ ಜಮೀನಿನಲ್ಲಿ ವಾಸಿಸುತ್ತಿರುವ ಖಾಸಗಿ ಅರಣ್ಯ ಪ್ರದೇಶದ ವಿಸ್ತೀರ್ಣ, ದಟ್ಟಣೆ (density) ಸದರಿ ಪ್ರದೇಶಕ್ಕೆ ಇರುವ ಸಂಪರ್ಕ, ಇನ್ನಿತರೆ ವಿವರಗಳು.

(ii) ಈ ಖಾಸಗಿ ಅರಣ್ಯದ ಭೂ ದಾಖಲಾತಿಗಳಾದ ಆರ್.ಟಿ.ಸಿ. ಪಹಣಿ, ಖಾತೆ, ಮ್ಯುಟೇಶನ್, ನಕ್ಷೆ, ಸರ್ವೆ ದಾಖಲಾತಿಗಳು, ಇನ್ನಿತರೆ ದಾಖಲಾತಿಗಳು ಒಳಗೊಂಡಂತೆ ಸುತ್ತಲು ಇರುವ ಅರಣ್ಯ ಪ್ರದೇಶದ ನೋಟಿಫಿಕೇಷನ್ ಸಹ ಒದಗಿಸುವುದು.

(iii) ಈ ಖಾಸಗಿ ಅರಣ್ಯವನ್ನು ಸ್ವಾಧೀನ ಪಡಿಸಿಕೊಳ್ಳಲೇ ಬೇಕಾದ ಕಾರಣಗಳನ್ನು ನೀಡುವುದು.

(iv) ಭೂ ಮಾಪನಾ ಇಲಾಖೆಯವರು ಸ್ವಾಧೀನ ಪಡಿಸಿಕೊಳ್ಳಬೇಕಾದ ಪ್ರದೇಶಗಳ ಬಗ್ಗೆ ನಿಖರವಾದ ಮಾಹಿತಿ ನೀಡುವುದು. ವಿಶೇಷವಾಗಿ ಮೂಲ ದಾಖಲಾತಿಗಳ ಪ್ರಕಾರದಂತೆ, ಮಂಜೂರಾದ / ಮಾಲಿಕತ್ವ ಹೊಂದಿರುವ ಪ್ರದೇಶವೇ, ಈಗ ಹಾಲಿ ಸ್ವಾಧೀನ ಪಡಿಸಿಕೊಳ್ಳಬೇಕಾದ ಪ್ರದೇಶವಾಗಿರುತ್ತದೆಯೇ? ಅಥವಾ ಇಲ್ಲವೇ ಎಂದು ದೃಢೀಕರಿಸುವುದು. ಈ ಬಗ್ಗೆ ಸರ್ವೆ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ಮಾಡಿ ದೃಢೀಕರಿಸುವುದು. ಈ ರೀತಿ ಮೋಜಣಿ ಮಾಡುವಾಗ ಮೂಲ ದಾಖಲಾತಿಗಳ ಪ್ರಕಾರವೇ ಸರ್ವೆ ಮಾಡುವುದು.

4. ಮೇಲೆ ಉಲ್ಲೇಖ (2)ರಲ್ಲಿ ಓದಲಾದ ದಿನಾಂಕ: 16-10-2012 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರು ರಚಿಸಿರುವ ಎರಡು ತಜ್ಞರ ಸಮಿತಿಗಳನ್ನು ರದ್ದುಪಡಿಸಿ, ಜಿಲ್ಲಾಮಟ್ಟದಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪುನರ್ ರಚಿತ ಸಮಿತಿಯೊಂದನ್ನು ರಚಿಸಲು ತೀರ್ಮಾನಿಸಲಾಯಿತು. ಅದರಂತೆ ಮೇಲೆ ಉಲ್ಲೇಖ (4)ರಲ್ಲಿ ಓದಲಾದ ದಿನಾಂಕ: 06.01.2014ರ ಆದೇಶದಲ್ಲಿ ಪ್ರಾಕೃತಿಕ ಕಾಯ್ದಿಟ್ಟ ಅರಣ್ಯ ಮತ್ತು ರಕ್ಷಿತ ಅರಣ್ಯಗಳ ಮಧ್ಯ ಭಾಗದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿರುವ ಖಾಸಗಿ ಪ್ರದೇಶವನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಕುರಿತು ಜಿಲ್ಲಾ ಮಟ್ಟದ ಸಮಿತಿಯನ್ನು ಮತ್ತು ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು ಹಾಗೂ ಸಮಿತಿಯು ಪರಿಶೀಲಿಸಬೇಕಾಗಿರುವ ದಾಖಲೆಗಳ ಬಗ್ಗೆ ಆದೇಶ ಹೊರಡಿಸಲಾಗಿತ್ತು.

...3..

5. ಮೇಲೆ ಉಲ್ಲೇಖ (5)ರಲ್ಲಿ ಓದಲಾದ ದಿನಾಂಕ: 06.012014ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾದಂತೆ ಖಾಸಗಿ ಅರಣ್ಯ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಜಮೀನುಗಳು ಮತ್ತು ಇತರೆ ಚರ ಮತ್ತು ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡಲು, ಸೂಕ್ತ ಪರಿಹಾರ ನಿಗಧಿ ಮಾಡಲು ಅನುಸರಿಸಬೇಕಾದ ವಿಧಿವಿಧಾನಗಳ ಬಗ್ಗೆ ನೀಡಲಾಗಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಈ ಹಿಂದೆ ಹೊರಡಿಸಲಾಗಿರುವ ಸಂಖ್ಯೆ: ಅಪಜೀ 139 ಎಫ್‌ಎಎಫ್ 2012, ದಿನಾಂಕ: 06.01.2014ರ ಆದೇಶವನ್ನು ಮಾರ್ಪಡಿಸಿ ಈ ಕೆಳಗಿನಂತೆ ಮಾರ್ಪಡಿಸಿದ ಆದೇಶವನ್ನು ಹೊರಡಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಅಪಜೀ 139 ಎಫ್‌ಎಎಫ್ 2012,</u>
<u>ಬೆಂಗಳೂರು, ದಿನಾಂಕ: 22.02.2014</u>

1. ಮೇಲೆ ಉಲ್ಲೇಖ (5)ರಲ್ಲಿ ಓದಲಾದ ದಿನಾಂಕ; 06.01.2014 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 139 ಎಫ್‌ಎಎಫ್ 2012, ದಿನಾಂಕ: 06.01.2014ರ ಆದೇಶವನ್ನು ಮಾರ್ಪಡಿಸಿ, ಖಾಸಗಿ ಅರಣ್ಯ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಜಮೀನುಗಳು ಮತ್ತು ಇತರೆ ಚರ ಮತ್ತು ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡಲು ಸೂಕ್ತ ಪರಿಹಾರ ನಿಗಧಿ ಮಾಡಲು ಹಾಗೂ ಈ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾಮಟ್ಟದ ಸಮಿತಿಯನ್ನು ಸರ್ಕಾರ ರಚಿಸಿದೆ.

(1)	ಜಿಲ್ಲಾಧಿಕಾರಿ	-	ಅಧ್ಯಕ್ಷರು
(2)	ಉಪ ನಿರ್ದೇಶಕರು (ಭೂ ದಾಖಲೆಗಳು)	-	ಸದಸ್ಯರು
(3)	ಜಿಲ್ಲಾ ನೋಂದಣಾಧಿಕಾರಿಗಳು	-	ಸದಸ್ಯರು
(4)	ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ/ವನ್ಯಜೀವಿ)	-	ಸದಸ್ಯರು
(5)	ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿಲ್ಲಾ ಕೇಂದ್ರ ಸ್ಥಾನ	-	ಸದಸ್ಯ ಕಾರ್ಯದರ್ಶಿ

2. ಅರಣ್ಯ ಇಲಾಖಾ ಸುಪರ್ಧಿನಲ್ಲಿರದ ಖಾಸಗಿ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ವಿವರಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿನ ಚೆಕ್‌ಲಿಸ್ಟ್ ನಂತೆ ಪರಿಶೀಲಿಸುವುದು.

3. **ಅರಣ್ಯ ಇಲಾಖೆಯ ಸುಪರ್ಧಿನಲ್ಲಿರದ ಖಾಸಗಿ ಪ್ರದೇಶಗಳನ್ನು ಅರಣ್ಯ ಇಲಾಖೆಯು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಅನುಸರಿಸಬೇಕಾದ ವಿಧಿವಿಧಾನಗಳು ಹಾಗೂ ಮಾರ್ಗಸೂಚಿಗಳು ನೀಡಿತು.**

(i) ಖಾಸಗಿ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳುವ ಅಗತ್ಯತೆ ಬಗ್ಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಮತ್ತು ಜಿಲ್ಲಾ ಸಮಿತಿ ಸೂಕ್ತ ಸಮರ್ಥನೆಯನ್ನು ನೀಡುವುದು.

(ii) ಖಾಸಗಿ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶ, ಸದರಿ ಪ್ರದೇಶಗಳ ಸ್ವರೂಪ, ಸ್ವಾಧೀನ ಪಡಿಸಿಕೊಳ್ಳುವುದರಿಂದ ಅರಣ್ಯ ಮತ್ತು ಅರಣ್ಯ ನಿರ್ವಹಣೆಗೆ ಆಗುವ ಅನುಕೂಲ, ಇನ್ನಿತರ ವಿಷಯಗಳ ಬಗ್ಗೆ ಸ್ಪಷ್ಟ ಚಿತ್ರಣವಿರಬೇಕು.

(iii) ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಖಾಸಗಿ ಪ್ರದೇಶವು ಅರಣ್ಯ ಪ್ರದೇಶದ ಒಳಗಡೆ ಇದ್ದರೂ ಸಹ ಹಾಲಿ ಇರುವ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರಬೇಕು ಮತ್ತು ಸದರಿ ಪ್ರದೇಶಕ್ಕೆ ಪ್ರವೇಶಿಸಲು ಬೇರೊಂದು ಖಾಸಗಿ ಜಮೀನಿನಿಂದ ಹೋಗುವ ಪ್ರಮೇಯ ಇರಬಾರದು. ಒಂದು ವೇಳೆ ಹಲವಾರು ಖಾಸಗಿ ಪ್ರದೇಶಗಳಿದ್ದರೆ ಮೊದಲು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳಬೇಕು. ತದನಂತರ ಸ್ವಾಧೀನ ಪಡಿಸಿಕೊಂಡ ಪ್ರದೇಶಗಳಿಗೆ

ಹೊಂದಿ ಕೂಡಿರುವ ಪ್ರದೇಶವನ್ನು ಒಂದೊಂದಾಗಿ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದು. ಅಥವಾ, ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ಪ್ರದೇಶಗಳನ್ನು ಒಂದೊಂದಾಗಿ ಅಥವಾ ಒಟ್ಟಾಗಿ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬಹುದು. ಆದರ, ಅರಣ್ಯ ಎನ್‌ಕ್ಲೋಸರ್‌ನಲ್ಲಿ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಪ್ರದೇಶವು ಮತ್ತೊಂದು ಎನ್‌ಕ್ಲೋಸರ್ ಆಗಬಾರದು.

(iv) ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸ್ವಾಧೀನ ಪಡಿಸಿಕೊಳ್ಳಬೇಕಾದ ವಿವರಗಳನ್ನು ಮತ್ತು ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಏಕಮುಖ ಕಡತದ ಮುಖಾಂತರ ಸಂಬಂಧಪಟ್ಟ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿ ಅವರ ಅನುಮೋದನೆಯನ್ನು ಪಡೆದು ಜಿಲ್ಲಾ ಸಮಿತಿಗೆ ಸಲ್ಲಿಸುವುದು.

(v) ಸ್ವಾಧೀನ ಪಡಿಸಿಕೊಳ್ಳಬೇಕಾದ ಪ್ರದೇಶಗಳನ್ನು 1:50,000 ಟೋಪೋ ಶೀಟ್‌ಗಳಲ್ಲಿ ಮತ್ತು ವಿಲೇಜ್ ಮ್ಯಾಪ್‌ಗಳಲ್ಲಿ ಗುರುತಿಸಿರಬೇಕು. ಸದರಿ ನಕ್ಷೆಯಲ್ಲಿ ಆ ಪ್ರದೇಶದಲ್ಲಿರುವ ಒಟ್ಟಾರೆ ಅರಣ್ಯ ಪ್ರದೇಶ, ಸದರಿ ಪ್ರದೇಶದಲ್ಲಿರುವ ಎಲ್ಲಾ ಎನ್‌ಕ್ಲೋಸರ್‌ಗಳು ಮತ್ತು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಪ್ರದೇಶಗಳನ್ನು ಸರಿಯಾಗಿ ವಿವಿಧ ಬಣ್ಣಗಳಿಂದ ಗುರುತಿಸುವುದು. ಇದರಲ್ಲಿ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳ ಸಹಿ ಇರಬೇಕು.

(vi) ಸ್ವಾಧೀನ ಪಡಿಸಿ ಕೊಳ್ಳಬೇಕಾದ ಪ್ರದೇಶದ ಜಂಟಿ ಸರ್ವೆ ಮಾಡಿ ಹದ್ದುಬಸ್ತುಗಳನ್ನು ಗುರುತಿಸಿರಬೇಕು. ಈ ನಕ್ಷೆಗಳಲ್ಲಿ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಕಾರಿ, ಉಪ ನಿರ್ದೇಶಕರು, ಭೂ ಮಾಪನಾ ಇಲಾಖೆ ಇವರ ಮತ್ತು ಅವರ ಅಧೀನಾಧಿಕಾರಿಗಳ ಸಹಿ ಇರಬೇಕು.

(vii) ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಪ್ರದೇಶವು ಯಾವುದೇ ರೀತಿಯ ಸರ್ಕಾರಿ ಅರಣ್ಯ ಪ್ರದೇಶವಲ್ಲವೆಂದು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸುವುದು. ಅದೇ ರೀತಿ ಸದರಿ ಪ್ರದೇಶವು ಸರ್ಕಾರದ ಜಮೀನಲ್ಲವೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೂ ದೃಢೀಕರಿಸುವುದು

(viii) ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಪ್ರದೇಶದ ಮಾಲೀಕರು ಸದರಿ ಪ್ರದೇಶವನ್ನು ಅರಣ್ಯ ಇಲಾಖೆಯು ಸ್ವಾಧೀನ ಪಡಿಸಿಕೊಳ್ಳಲು ಇಚ್ಛಿಸಿರುವ ಬಗ್ಗೆ ಪತ್ರವನ್ನು ಪಡೆಯುವುದು.

(ix) ಜಿಲ್ಲಾ ಮಟ್ಟದ ಸಮಿತಿಗಳು ಪ್ರತೀ ತಿಂಗಳು ಮೊದಲನೇ ವಾರ ಸಭೆ ಸೇರತಕ್ಕದ್ದು. ಅರಣ್ಯ ಇಲಾಖೆಯು ಸ್ವಾಧೀನ ಪಡಿಸಿಕೊಳ್ಳಬೇಕಾದ ಪ್ರತಿ ಪ್ರಕರಣವನ್ನು ಪರಿಶೀಲಿಸಿ ಸಮಿತಿಯ ಮುಂದೆ ವರದಿಯನ್ನು ಮಂಡಿಸುವುದು. ಪ್ರತಿ ಕೇಸಿನ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಖಾಸಗಿ ಪ್ರದೇಶವನ್ನು ಸ್ವಾಧಿನ ಪಡಿಸಿಕೊಳ್ಳಲು ಅವಶ್ಯಕತೆ ಇದ್ದಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು. ಈ ತೀರ್ಮಾನದ ಬಗ್ಗೆ ವರದಿ ಮತ್ತು ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರಿಗೆ ಸಲ್ಲಿಸತಕ್ಕದ್ದು. ಈ ತೀರ್ಮಾನದ ಪ್ರತಿಯನ್ನು ಸಂಬಂಧಪಟ್ಟ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕಳುಹಿಸುವುದು. ಒಂದು ವೇಳೆ ಈ ತೀರ್ಮಾನಗಳ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಆಕ್ಷೇಪಣೆ, ಷರಾ, ಮಾರ್ಗದರ್ಶನ ಮತ್ತು ಪುನರ್ ಪರಿಶೀಲನೆ ಮಾಡುವ ವಿಷಯಗಳಿದ್ದಲ್ಲಿ ಅಂತಹ ವಿಷಯಗಳ ಬಗ್ಗೆ ಎರಡು ವಾರದೊಳಗಾಗಿ ಜಿಲ್ಲಾ ಸಮಿತಿಗೆ ಬರೆದು ಅದರ ಪ್ರತಿಯೊಂದನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರಿಗೆ ಸಲ್ಲಿಸುವುದು. ಜಿಲ್ಲಾ ಸಮಿತಿಯು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಆಕ್ಷೇಪಿಸಿರುವ ಪ್ರಕರಣಗಳನ್ನು ಮರು ಪರಿಶೀಲಿಸಿ ಇತ್ಯರ್ಥ ಪಡಿಸುವುದು. ಇಂತಹ ಪರಿಶೀಲನಾ ಸಭೆಗೆ ಜಿಲ್ಲಾ ಸಮಿತಿಯು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಗಳನ್ನು ಸಹ ಆಹ್ವಾನಿಸಿ ಸದರಿ ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದು.

(x) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಪರಿಶೀಲನೆಗೆ ಬರುವ ಎಲ್ಲಾ ಪ್ರಸ್ತಾವನೆ ಮೇಲೆ ತಮ್ಮ ಅಭಿಪ್ರಾಯ ನೀಡಿ ರಾಜ್ಯ ಮಟ್ಟದ ಸಭೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಈ ಬಗ್ಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಯವರ ಮಟ್ಟದಲ್ಲಿ ಯಾವುದೇ ಸಮಿತಿಯ ಅವಶ್ಯಕತೆ ಇರುವುದಿಲ್ಲ.

(xi) ರಾಜ್ಯ ಮಟ್ಟದ ಸಮಿತಿಯ ಸಭೆಯನ್ನು ಕೊನೆ ಪಕ್ಷ ಪ್ರತಿ 45 ದಿನಗಳಿಗೊಮ್ಮೆ ಈ ಸಭೆಯನ್ನು ಆಯೋಜಿಸುವುದು. ಈ ಸಭೆಗೆ ಸಂಬಂಧಪಟ್ಟ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಆಹ್ವಾನಿಸುವುದು.

(xii) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರು ಪ್ರಸ್ತಾವನೆಗಳನ್ನು ಪರಿಶೀಲಿಸಿ ಶೀಘ್ರವಾಗಿ ರಾಜ್ಯ ಸಮಿತಿಗೆ ಮುಂದಿನ ತೀರ್ಮಾನಕ್ಕಾಗಿ ಸಲ್ಲಿಸುವುದು. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರು ಇಂತಹ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಸೂಕ್ತ ಬಜೆಟ್ ಶೀರ್ಷಿಕೆಯಲ್ಲಿ ಅನುದಾನವನ್ನು ನಿಗಧಿ ಪಡಿಸುವುದು/ ಕಾಯ್ದಿರಿಸುವುದು. ಸರ್ಕಾರಕ್ಕೆ ಶಿಫಾರಸ್ಸು ಮಾಡುವಾಗ ಲಭ್ಯವಿರುವ ಅನುದಾನದ ಬಗ್ಗೆ ಪ್ರಸ್ತಾವನೆಯಲ್ಲಿ ನಮೂದಿಸುವುದು.

(xiii) ಪ್ರತಿಯೊಂದು ಪ್ರಸ್ತಾವನೆಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಈ ನಡವಳಿಯ ಜೊತೆ ಲಗತ್ತಿಸಿರುವ ನಮೂನೆಯಲ್ಲಿ ಟಿಪ್ಪಣಿಯನ್ನು ಸಹ ಸಲ್ಲಿಸುವುದು.

(xiv) ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ಸುತ್ತೋಲೆ ಹೊರಡಿಸುವುದು. ಪ್ರತಿ ತಿಂಗಳು ಜಿಲ್ಲಾ ಸಮಿತಿಗಳನ್ನು ನಡೆಸಲು ಜಿಲ್ಲಾಧಿಕಾರಿಗಳಿಗೆ ಅರೆ ಸರ್ಕಾರಿ ಪತ್ರಗಳನ್ನು ಬರೆಯುವುದು.

(xv) ಕೊಡಗು ಜಿಲ್ಲೆ/ ಇತರೆ ಜಿಲ್ಲೆಗಳಲ್ಲಿನ ಪ್ರಸ್ತಾವನೆಗಳನ್ನು ಪರಿಗಣಿಸುವಾಗ ಜಮೀನು ಮತ್ತು ಸ್ವತ್ತುಗಳ ಮೇಲಿರುವ ಪೂರ್ಣ ಹಕ್ಕುಗಳು, ಭಾಗಶಃ ಹಕ್ಕುಗಳು ಇರುವ ಬಗ್ಗೆ ಜಿಲ್ಲಾ ಸಮಿತಿ ಮತ್ತು ಕಂದಾಯ ಇಲಾಖೆ ಸೂಕ್ತವಾಗಿ ತೀರ್ಮಾನಿಸುವುದು.

(xvi) ರಾಜ್ಯ ಸಮಿತಿಯ ತೀರ್ಮಾನದ ನಂತರ ಸ್ವಾಧೀನ ಪಡಿಸಿ ಕೊಳ್ಳಲು ನೋಟಿಫಿಕೇಶನ್‌ಗಳನ್ನು ಹೊರಡಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳುವುದು. ಜಮೀನಿನ ಮಾಲೀಕರು ಜಮೀನು ನೀಡಲು ಮತ್ತು ಸದರಿ ಸ್ವತ್ತಿನ ಮೌಲ್ಯ ತೆಗೆದು ಕೊಳ್ಳಲು ಒಪ್ಪಿದ ಬಗ್ಗೆ ಪತ್ರ/ ಅಫಿಡವಿಟ್ ನೀಡಿದ್ದಲ್ಲಿ ಶೀಘ್ರವಾಗಿ ಈ ಕನ್ಸೆಂಟ್ ಅವಾರ್ಡ್‌ನ್ನು ಸಹ ತಡವಿಲ್ಲದೆ ಹೊರಡಿಸಲು ಕ್ರಮ ಕೈಗೊಳ್ಳುವುದು.

ವಿ.ಸೂ.: ಜಿಲ್ಲಾ ಕೇಂದ್ರದಲ್ಲಿ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಇರದಿದ್ದಲ್ಲಿ ಆ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಉದಾ: ಉಡುಪಿ ಜಿಲ್ಲೆಯಲ್ಲಿ ಕುಂದಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಈ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

4. ಈ ಸಮಿತಿಯು ಸಂದರ್ಭಾನುಸಾರ ಇನ್ನಿತರೆ ಅಧಿಕಾರಿಗಳನ್ನು ಆಹ್ವಾನಿಸಲು ಅಧಿಕಾರ ಹೊಂದಿರುತ್ತದೆ.

(i) ಸಂಬಂಧಿಸಿದ ತಹಶೀಲ್ದಾರ್ ರವರು ಮೌಲ್ಯಮಾಪನದ ಬಗ್ಗೆ ಗೈಡೆನ್ಸ್ ವ್ಯಾಲ್ಯೂ, ಜಮೀನು ಮಾರಾಟದ ದರಗಳ ಅಂಕಿ-ಅಂಶಗಳು ಇನ್ನಿತರ ಅಂಶಗಳ ಜೊತೆಗೆ ಜಮೀನಿನ ಮೌಲ್ಯಮಾಪನವನ್ನು ಮಾಡಿ ವಿವರ ನೀಡುವುದು.

(ii) ಸದರಿ ಪ್ರದೇಶದಲ್ಲಿ ಕಟ್ಟಡಗಳು, ರಸ್ತೆ ಇನ್ನಿತರ ಸಿವಿಲ್ ಕೆಲಸಗಳಿದ್ದರೆ ಲೋಕೋಪಯೋಗಿ ಇಲಾಖೆಯು ಮೌಲ್ಯಮಾಪನ ಮಾಡುವುದು.

(iii) ತೋಟಗಾರಿಕಾ ಬೆಳೆಗಳು, ನೀರಾವರಿ ಸೌಲಭ್ಯಗಳನ್ನು, ಇನ್ನಿತರೆ ತೋಟಗಾರಿಕೆಗೆ, ಸಂಬಂಧಪಟ್ಟ ಸ್ವತ್ತುಗಳನ್ನು ತೋಟಗಾರಿಕಾ ಇಲಾಖೆ ನಿರ್ಧರಿಸುವುದು.

(iv) ಮರಗಳ ಮೌಲ್ಯವನ್ನು ಅರಣ್ಯ ಇಲಾಖೆ ಮಾಡುವುದು. ಅರಣ್ಯ ಮರಗಳ / ಪ್ರದೇಶದ ಮೌಲ್ಯಮಾಪನ ಮಾಡುವಾಗ ನೆಟ್ ಪ್ರೆಸೆಂಟ್ ವ್ಯಾಲ್ಯೂವನ್ನು ಗಣನೆಗೆ ತೆಗೆದುಕೊಳ್ಳಬಹುದು. ಆದರೆ ಸ್ವಾಧೀನ ಪ್ರಕ್ರಿಯೆಯಲ್ಲಿ ಸೋಲೇಷಿಯಂ, ಬಡ್ಡಿ ಇನ್ನಿತರ ಅಂಶಗಳನ್ನು ಪರಿಗಣಿಸಬೇಕಾಗಿರುವುದರಿಂದ ಕೇವಲ ನೆಟ್ ಪ್ರೆಸೆಂಟ್ ವ್ಯಾಲ್ಯೂವನ್ನೇ ಅಳವಡಿಸಿಕೊಳ್ಳಲಾಗುವುದಿಲ್ಲ.

(v) ಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನಿನ ಮಾಲೀಕರಿಗೆ ನೀಡುವ ಮೌಲ್ಯ ಹಾಗೂ ಪರಿಹಾರವನ್ನು ಈ ಸಮಿತಿಯು ನೆಗೋಷಿಯೇಷನ್ ಮಾಡುವುದು. ಈ ರೀತಿ ನೆಗೋಷಿಯೇಷನ್ ಮಾಡುವಾಗ ಇತ್ತೀಚಿನ ಹೊಸ ಭೂ ಸ್ವಾಧೀನ ಅಧಿನಿಯಮದಂತೆ ಸದರಿ ಜಮೀನಿನ ಮತ್ತು ಅದರಲ್ಲಿರುವ ಸ್ವತ್ತುಗಳ ಮೌಲ್ಯ, ಸೋಲೇಷಿಯಂ, ಬಡ್ಡಿ ದರ ಇನ್ನಿತರೆ ವಿಷಯಗಳನ್ನು ಸಹ ಗಮನದಲ್ಲಿಟ್ಟು ಕೊಳ್ಳುವುದು. ನೆಗೋಷಿಯೇಷನ್ ಮಾಡಿದ ಬಗ್ಗೆ ನಡವಳಿ ಮಾಡುವುದು ಮತ್ತು ಜಮೀನಿನ ಮಾಲೀಕರು ಒಪ್ಪಿಗೆ ನೀಡಿದ ಬಗ್ಗೆ ಸೂಕ್ತ ಪತ್ರ / ಅಫಿಡವಿಟ್ ಪಡೆಯುವುದು.

5. <u>ಪ್ರಸ್ತಾವನೆಗಳ ಜೊತೆ ಇರಬೇಕಾದ ದಾಖಲಾತಿಗಳು:</u>

(1) ಸ್ವಾಧೀನ ಪಡಿಸಿಕೊಳ್ಳಬೇಕಾದ ಪ್ರದೇಶದ ಮತ್ತು ಮಾಲೀಕರ ವಿವರಗಳು.
(2) ಮಾಲೀಕರು ಹೊಂದಿರುವ ಹಕ್ಕುಗಳ ಸ್ವರೂಪದ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯ.
(3) ಸ್ವಾಧೀನ ಪಡಿಸಿಕೊಳ್ಳುವ ಪ್ರದೇಶಕ್ಕೆ ಈಗಾಗಲೇ ಇರುವ ಹಕ್ಕುಗಳು ಮತ್ತು ಋಣಗಳು, ಈಸ್‌ಮೆಂಟ್ ರೈಟ್ಸ್, ಇತ್ಯಾದಿ.
(4) ಪಹಣಿ, ಖಾತಾ, ಎಕ್ಸ್‌ಟ್ರಾಕ್ಟ್, ಎನ್‌ಕಂಬರೆನ್ಸ್ ಸರ್ಟಿಫಿಕೇಟ್, ಹಿಸ್ಟರಿ ಆಫ್ ಮ್ಯುಟೇಷನ್, ರೆವಿನ್ಯೂ ಸೆಟ್ಲಮೆಂಟ್ ರೆಕಾರ್ಡ್ಸ್ ಹಾಗೂ ಇನ್ನಿತರೆ ಕಂದಾಯ ದಾಖಲಾತಿಗಳು.
(5) ವಿಲೇಜ್ ಮ್ಯಾಪ್, ಸರ್ವೆ ಆಫ್ ಇಂಡಿಯಾದ 1:50,000 ನಕ್ಷೆಯಲ್ಲಿ ಗುರುತಿಸುವುದು ಮತ್ತು ವರದಿ.
(6) ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಕ್ಷೆ ಮತ್ತು ವರದಿ
(7) ಸದರಿ ಪ್ರದೇಶದ ಉಪಗ್ರಹ ಚಿತ್ರಗಳು, ಛಾಯಾಚಿತ್ರಗಳು.
(8) ಸುತ್ತಲೂ/ಪಕ್ಕ ಇರುವ ಅರಣ್ಯ ಪ್ರದೇಶದ ನೋಟಿಫಿಕೇಷನ್
(9) ಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನಿನ ಮೌಲ್ಯಮಾಪನ / ಪರಿಹಾರದ ವರದಿ. ಇದರ ಜೊತೆ ಕಟ್ಟಡಗಳು, ತೋಟಗಾರಿಕೆ ಬೆಳೆಗಳು, ಮರ ಮಾಲ್ಕಿ, ನೀರಾವರಿ ಹಾಗೂ ಇನ್ನಿತರೆ ಸ್ವತ್ತುಗಳ ಮೌಲ್ಯಮಾಪನ.
(10) ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ವರದಿ.
(11) ಕಂದಾಯ ಇಲಾಖೆಯ ತಹಶಿಲ್ದಾರ್ ರವರ ಸ್ಥಳ ಮಹಜರ್ ವರದಿ, ಉಪ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ವರದಿ ಮತ್ತು ಶಿಫಾರಸ್ಸುಗಳು.
(12) ಜಿಲ್ಲಾ ಮಟ್ಟದ ಸಭೆಯ ನಡಾವಳಿಗಳು/ತೀರ್ಮಾನಗಳು
(13) ಮಾಲೀಕರ ಒಪ್ಪಿಗೆ ಪತ್ರ ಮತ್ತು ನಿರ್ಧರಿಸಿದ ಮೌಲ್ಯವನ್ನು ಒಪ್ಪಿಕೊಂಡು ಜಮೀನು ನೀಡಲು ಕೊಟ್ಟ ಅಫಿಡವಿಟ್.
(14) ಸ್ವಾಧೀನ ಪಡಿಸಿಕೊಳ್ಳಲು ಅವಶ್ಯವಿರುವ ಇನ್ನಿತರೆ ವರದಿ ಮತ್ತು ದಾಖಲಾತಿಗಳು

...7...

(15) ಅಡಕಗೊಳಿಸಿರುವ ಟಿಪ್ಪಣಿ / ಚೆಕ್ ಲಿಸ್ಟ್ ಪ್ರಕಾರ ಪ್ರಸ್ತಾವನೆಯನ್ನು ಸಲ್ಲಿಸುವುದು
(16) ಇನ್ನಿತರೆ ಮಾಹಿತಿ [illegible], ಪತ್ರಗಳು ಮತ್ತು ಅಡಕಗಳು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಪಿ.ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಸದರಿ ಆದೇಶವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಅಧೀನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, 4ನೇ ಮಹಡಿ, 2ನೇ ಗೇಟ್, ಬೆಂಗಳೂರು ಇಲ್ಲಿಗೆ ಕಳುಹಿಸಿಕೊಡುವಂತೆ ಕೋರಿದೆ.

ಪ್ರತಿಗಳು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನಸೌಧ, ಬೆಂಗಳೂರು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು - 03.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ ವಿಭಾಗಗಳು.
6. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು - 03.
7. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (EWPT), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು - 03.
8. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂದಾಖಲೆ), ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು - 03.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ ~~(ಪ್ರಾದೇಶಿಕ / ವನ್ಯಜೀವಿ)~~.
11. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಭೂ ದಾಖಲೆಗಳು).
12. ಎಲ್ಲಾ ಜಿಲ್ಲೆಗಳ ಜಿಲ್ಲಾನೋಂದಣಾಧಿಕಾರಿಗಳು
13. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ-೨

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರ ಪ್ರಶ್ನೆ ಸಂಖ್ಯೆ: 745ಕ್ಕೆ ಉತ್ತರ

		ಮಾನವ ಪ್ರಾಣ ಹಾನಿ									
ಕ್ರ.ಸಂ	ಜಿಲ್ಲೆ / ವಿಭಾಗ	2016–17		2017–18		2018–19		2019–20		2020–21	
		ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1.	ರಾಮನಗರ	3 (ಆನೆ)	15.00	2 (ಆನೆ) 1 (ಚಿರತೆ) 1 (ಕರಡಿ)	20.00	1 (ಆನೆ)	5.00	2 (ಆನೆ)	10.00	2 (ಚಿರತೆ)	15.00
	ಬೆಂಗಳೂರು ಗ್ರಾಮಾಂತರ ಜಿಲ್ಲೆ										
2.	ಬೆಂಗಳೂರು ಗ್ರಾ	2 (ಆನೆ)	10.00	–	–	–	–	1 (ಆನೆ)	5.00	–	–
3.	ಬನ್ನೇರುಘಟ್ಟ	3 (ಆನೆ)	15.00	3 (ಆನೆ)	15.00	–	–	1 (ಆನೆ)	7.50	1 (ಆನೆ)	7.50
4.	ಕೋಲಾರ	2 (ಆನೆ)	10.00	2 (ಚಿರತೆ)	10.00	1 (ಆನೆ)	5.00	4 (ಆನೆ)	30.00	3 (ಆನೆ)	22.50
5.	ಚಿಕ್ಕಬಳ್ಳಾಪುರ	–	–	1 (ಕರಡಿ)	5.00	–	–	–	–	–	–
6.	ಬೆಳಗಾವಿ	1 (ಕರಡಿ) 1 (ಮೊಸಳೆ)	10.00	–	–	1 (ಕರಡಿ)	5.00	–	–	–	–
7.	ಗೋಕಾಕ್	2 (ಮೊಸಳೆ)	10.00	–	–	–	–	–	–	–	–
8.	ಬಾಗಲಕೋಟೆ	–	–	–	–	1 (ಮೊಸಳೆ)	5.00	1 (ಮೊಸಳೆ)	5.00	1 (ಮೊಸಳೆ)	7.50
9.	ಬಿಜಾಪುರ	–	–	1 (ಮೊಸಳೆ)	5.00	1 (ಮೊಸಳೆ)	5.00	–	–	1 (ತೋಳ)	7.50
10.	ಬಳ್ಳಾರಿ	1 (ಚಿರತೆ) 1 (ಕರಡಿ)	10.00	–	–	3 (ಚಿರತೆ)	15.00	1 (ಕರಡಿ) 1 (ಮೊಸಳೆ)	12.50	–	–
11.	ಚಿತ್ರದುರ್ಗ	1 (ಆನೆ)	5.00	2 (ಆನೆ)	10.00	–	–	1 (ಕರಡಿ)	5.00	–	–
12.	ದಾವಣಗೆರೆ	–	–	–	–	–	–	–	–	–	–
13.	ಕೊಪ್ಪಳ	–	–	–	–	–	–	–	–	2 (ಚಿರತೆ)	15.00

	ಚಾಮರಾಜನಗರ ಜಿಲ್ಲೆ										
14	ಬಿ.ಆರ್.ಟಿ	–	–	1 (ಆನೆ)	5.00	3 (ಆನೆ)	15.00	1 (ಆನೆ)	5.00	2 (ಆನೆ)	15.00
15	ಕಾವೇರಿ	3 (ಆನೆ) 1 (ಕಾಡುಹಂದಿ)	20.00	–	–	1 (ಆನೆ)	5.00	1 (ಆನೆ)	5.00	1 (ಆನೆ)	7.50
16	ಮಲೈ ಮಹದೇಶ್ವರ	3 (ಆನೆ)	15.00	–	–	1 (ಆನೆ)	5.00	4 (ಆನೆ)	20.00	1 (ಆನೆ)	7.50
17	ಬಂಡೀಪುರ	2 (ಆನೆ)	10.00	1 (ಆನೆ)	5.00	1 (ಆನೆ)	5.00	3 (ಆನೆ) 2 (ಹುಲಿ)	27.50	3 (ಆನೆ)	22.50
	ಚಿಕ್ಕಮಗಳೂರು ಜಿಲ್ಲೆ										
18	ಚಿಕ್ಕಮಗಳೂರು	1 (ಆನೆ) 1 (ಕರಡಿ)	10.00	1 (ಕಾಡುಕೋಣ)	5.00	2 (ಆನೆ)	10.00	2 (ಆನೆ) 1 (ಕಾಡುಹಂದಿ)	15.00	–	–
19	ಕೊಪ್ಪ	–	–	–	–	1 (ಕಾಡೆಮ್ಮೆ)	5.00	2 (ಕಾಡುಕೋಣ)	12.50	-	-
20	ಬೀದರ್	–	–	1 (ಕಾಡುಹಂದಿ)	5.00	–	–	1 (ಕರಡಿ)	7.50	-	-
21	ಕಲುಬರಗಿ	–	–	–	–	1 (ಕಾಡುಹಂದಿ)	5.00	1 (ಕಾಡುಹಂದಿ)	5.00	1 (ಕಾಡುಹಂದಿ)	7.50
22	ರಾಯಚೂರು	–	–	–	–	–	–	1 (ತೋಳ)	7.50	2 (ಮೊಸಳೆ)	15.00
23	ಯಾದಗಿರಿ	–	–	–	–	–	–	1 (ಮೊಸಳೆ)	5.00	1 (ಮೊಸಳೆ)	7.50
24	ಹಳಿಯಾಳ	–	–	1 (ಮೊಸಳೆ) 1(ಕರಡಿ)	10.00	–	–	–	–	–	–
25	ಯಲ್ಲಾಪುರ	–	–	1 (ಕರಡಿ)	5.00	–	–	–	–	–	–
26	ಹಾಸನ	4 (ಆನೆ)	20.00	5 (ಆನೆ)	25.00	1 (ಆನೆ)	5.00	3 (ಆನೆ)	15.00	5 (ಆನೆ)	37.50
27	ತುಮಕೂರು	5 (ಆನೆ) 1 (ಕರಡಿ)	25.00	1 (ಕರಡಿ)	5.00	1 (ಕರಡಿ)	5.00	1 (ಆನೆ) 4 (ಚಿರತೆ)	32.50	2 (ಚಿರತೆ)	15.00
28	ಮಡಿಕೇರಿ	3 (ಆನೆ)	15.00	3 (ಆನೆ)	15.00	–	–	2 (ಆನೆ)	12.50	4 (ಆನೆ)	30.00
29	ವಿರಾಜಪೇಟೆ	3 (ಆನೆ)	15.00	2 (ಆನೆ)	10.00	–	–	1 (ಆನೆ) 1 (ಕಾಡುಕೋಣ)	12.50	3 (ಆನೆ) 3 (ಹುಲಿ)	45.00
30	ಮಡಿಕೇರಿ ವಜೀ	–	–	–	–	–	–	1 (ಆನೆ)	5.00	–	–

31	ಮಂಗಳೂರು	1 (ಆನೆ)	5.00	–	–	–	–	–	–	–	–
32	ಕುಂದಾಪುರ	–	–	–	–	1 (ಕಾಡುಹಂದಿ)	5.00	1 (ಜಿಂಕೆ) 2 (ಕಾಡುಕೋಣ)	15.00	–	–
33	ಕುದುರೆಮುಖ	1 (ಕಾಡೆಮ್ಮೆ)	5.00	–	–	–	–	–	–	–	–
34	ಮಂಡ್ಯ	–	–	–	–	1 (ಮೊಸಳೆ)	5.00	–	–	–	–
35	ಮೈಸೂರು	–	–	–	–	–	–	2 (ಆನೆ)	12.50	1 (ಆನೆ)	7.50
36	ನಾಗರಹೊಳೆ	1 (ಆನೆ)	5.00	–	–	1 (ಆನೆ) 3 (ಹುಲಿ)	20.00	–	–	(1 ಹುಲಿ)	7.50
37	ಭದ್ರಾವತಿ	1 (ಆನೆ)	5.00	3 (ಆನೆ) 1(ಕರಡಿ)	20.00	–	–	–	–	1 (ಕರಡಿ)	7.50
		48	240.00	35	175.00	26	130.00	50	272.50	41	307.50

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರ ಪ್ರಶ್ನೆ ಸಂಖ್ಯೆ: 745ಕ್ಕೆ ಉತ್ತರ

ಅನುಬಂಧ-3

		2016–17		2017–18		2018–19		2019–20		2020–21	
ಕ್ರ.ಸಂ	ಜಿಲ್ಲೆ / ವಿಭಾಗ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1.	ರಾಮನಗರ	961	31,77,660.00	2471	1,15,20,777.00	1152	64,81,575.00	1161	57,68,739.00	1571	78,95,000.00
2.	ಬೆಂಗಳೂರು ನಗರ	47	1,89,582.00	29	2,30,000.00	17	1,90,000.00	47	360759	15	1,69,600.00
3.	ಬೆಂಗಳೂರು ಗ್ರಾ	409	22,15,000.00	543	48,40,844.00	49	9,75,000.00	24	282500	0	-
4.	ಬನ್ನೇರುಘಟ್ಟ ರಾ.ಉ	767	21,40,869.00	781	26,34,280.00	545	19,77,271.00	595	26,61,391.00	1400	48,21,000.00
5.	ಕೋಲಾರ	47	3,90,650.00	509	39,51,800.00	132	15,94,716.00	1488	55,42,000.00	1146	74,80,000.00
6.	ಚಿಕ್ಕಬಳ್ಳಾಪುರ	0	–	17	1,47,000.00	5	57,154.00	13	150000	15	98,000.00
7.	ಬಾಗಲಕೋಟೆ	0	–	1	10,000.00	0	0	0	0	0	-
8.	ಬೆಳಗಾವಿ	80	5,93,387.00	697	60,11,849.00	1250	50,76,000.00	1061	56,41,200.00	727	40,05,000.00
9.	ಗೋಕಾಕ್	0	–	1	20,000.00	0	0	2	11200	0	-
10.	ಬಳ್ಳಾರಿ	180	5,30,168.00	139	4,42,590.00	119	5,71,425.00	124	5,23,229.00	162	6,24,951.00
11.	ಚಿತ್ರದುರ್ಗ	31	1,51,011.00	92	17,98,884.00	21	1,21,023.00	0	0.00	45	3,81,670.00
12.	ದಾವಣಗೆರೆ	102	3,97,470.00	340	13,33,425.00	38	2,25,000.00	1	1440	183	8,41,675.00
13.	ಕೊಪ್ಪಳ	0	–	0	0	2	3,100.00	1	34564	44	3,35,714.00
14.	ಬಿ.ಆರ್.ಟಿ ವಜೀ	141	4,68,254.00	126	6,48,234.00	202	12,12,973.00	264	18,74,066.00	336	22,34,718.00
15.	ಕಾವೇರಿ ವಜೀ	487	22,87,606.00	1240	53,10,611.00	624	25,35,367.00	855	53,36,000.00	920	59,08,742.00
16.	ಮಲೈ ಮಹದೇಶ್ವರ ವಜೀ	111	6,82,767.00	202	19,31,016.00	95	7,72,515.00	230	17,36,167.00	326	22,48,655.00
17.	ಭದ್ರಾ ವಜೀ	68	5,70,391.00	43	4,68,000.00	66	7,69,000.00	70	9,30,000.00	103	10,80,000.00
18.	ಚಿಕ್ಕಮಗಳೂರು	919	60,85,114.00	1759	1,05,59,059.00	637	47,90,315.00	1062	88,64,000.00	1089	94,44,389.00
19.	ಕೊಪ್ಪ	101	8,69,995.00	144	11,95,850.00	158	15,79,714.00	114	10,56,860.00	188	19,81,939.00
20.	ಧಾರವಾಡ	23	2,61,000.00	157	9,92,000.00	199	9,50,000.00	78	13,00,000.00	355	18,29,998.00
21.	ಗದಗ	944	13,85,106.00	1330	22,65,000.00	537	11,43,000.00	285	5,23,688.00	404	8,92,240.00
22.	ಹಾವೇರಿ	2424	20,34,394.00	537	11,05,000.00	584	11,10,000.00	453	17,31,511.00	414	13,77,000.00
23.	ರಾಣೇಬೆನ್ನೂರು ವಜೀ	730	35,85,081.00	1052	38,50,000.00	0	0	0	0	0	-

24.	ಬಂಡೀಪುರ	2416	67,87,489.00	1542	45,87,594.00	1323	43,89,859.00	3618	1,20,68,467.00	2679	91,28,414.00
25.	ನಾಗರಹೊಳೆ	693	31,81,267.00	447	25,18,000.00	1197	62,68,916.00	894	50,98,167.00	1314	75,03,800.00
26.	ಬೀದರ್	40	1,00,610.00	234	10,82,000.00	186	11,40,000.00	193	10,00,000.00	249	10,90,000.00
27.	ಕಲುಬರಗಿ	16	64,310.00	20	95,065.00	7	34,865.00	2	5,000.00	31	3,10,783.00
28.	ಯಾದಗಿರಿ	0	–	50	1,79,000.00	0	0	0	0	0	-
29.	ದಾಂಡೇಲಿ	85	4,21,416.00	71	3,71,878.00	60	2,60,000.00	38	2,68,500.00	98	7,08,995.00
30.	ಹಳಿಯಾಳ	438	14,39,878.00	506	16,26,575.00	309	11,55,135.00	150	7,61,000.00	196	10,87,900.00
31.	ಹೊನ್ನವಾರ	2	17,500.00	2	47,400.00	0	0	4	81,000.00	50	4,26,100.00
32.	ಕಾರವಾರ	2	4,920.00	0	0	12	84,040.00	13	1,63,200.00	12	1,21,000.00
33.	ಶಿರಸಿ	406	9,95,206.00	168	6,17,000.00	262	10,00,000.00	180	9,10,000.00	429	21,70,000.00
34.	ಯಲ್ಲಾಪುರ	144	11,45,704.00	347	31,67,363.00	184	14,11,297.00	208	17,06,000.00	402	36,38,700.00
35.	ಹಾಸನ	1350	74,06,719.00	3018	1,51,71,939.00	1353	71,09,654.00	2184	1,28,53,426.00	3424	2,15,28,687.00
36.	ತುಮಕೂರು	898	38,73,482.00	824	36,47,365.00	405	24,04,400.00	152	8,81,210.00	212	13,99,017.00
37.	ಮಡಿಕೇರಿ	1374	61,54,566.00	1492	73,84,156.00	681	34,96,672.00	1259	73,03,000.00	1428	96,44,669.00
38.	ವಿರಾಜಪೇಟೆ	994	41,47,564.00	1707	1,04,17,453.00	989	60,14,454.00	1146	84,61,000.00	1430	94,05,924.00
39.	ಮಡಿಕೇರಿ ವಜೀ	405	14,80,027.00	615	28,45,248.00	641	37,36,030.00	1193	71,05,000.00	797	48,30,000.00
40.	ಕುದುರೆಮುಖ ವಜೀ	85	5,01,260.00	129	10,24,965.00	131	8,01,979.00	59	3,58,938.00	77	5,82,690.00
41.	ಕುಂದಾಪುರ	147	6,78,853.00	461	22,15,495.00	274	15,87,648.00	126	7,05,956.00	382	21,90,055.00
42.	ಮಂಗಳೂರು	80	7,86,640.00	76	10,10,074.00	74	8,29,500.00	86	12,71,174.00	246	29,17,296.00
43.	ಹುಣಸೂರು	118	3,82,831.00	243	11,28,373.00	56	2,38,216.00	63	2,82,207.00	163	7,55,691.00
44.	ಮಂಡ್ಯ	22	1,40,297.00	125	11,66,918.00	38	2,93,750.00	62	3,68,306.00	52	4,93,004.00
45.	ಮೈಸೂರು	170	6,88,100.00	1996	63,47,916.00	793	24,72,210.00	695	22,34,350.00	816	32,23,720.00
46.	ಮೈಸೂರು ವಜೀ	0	–	16	86,820.00	2	6,500.00	6	28350	5	21,665.00
47.	ಭದ್ರಾವತಿ	148	12,22,979.00	754	73,84,635.00	561	36,23,503.00	455	27,78,475.00	433	30,01,684.00
48.	ಸಾಗರ	29	1,59,780.00	54	5,37,548.00	100	7,44,230.00	69	5,20,000.00	112	10,06,000.00
49.	ಶಿವಮೊಗ್ಗ	319	6,17,715.00	328	8,86,342.00	408	15,49,432.00	150	6,48,770.00	159	7,69,740.00
50.	ಶಿವಮೊಗ್ಗ ವಜೀ	32	1,52,808.00	90	2,03,248.00	76	4,29,885.00	18	1,00,000.00	72	4,61,851.00
	ಒಟ್ಟು	18,985	7,05,67,426.00	27,525	13,70,16,590.00	16,554	8,32,17,323.00	20,951	11,22,90,810.00	24,711	14,20,67,676.00

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು